60

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಎಸ್.ಎಲ್.ಭೋಜೇಗೌಡ ಹಾಗೂ ಶ್ರೀ ಟಿ.ಎ. ಶರವಣ ರವರ ನಿಯಮ 330ನೇ ಮೇರೆಗಿನ ಗಮನ ಸೆಳೆಯುವ ಸೂಚನೆಯ ಕುರಿತು.**

ಸೂಚನೆ:

ಮಾನ್ಯ ಸಮಾಜ ಕಲ್ಯಾಣ ಸಚಿವರು ಸಂಖ್ಯೆ: ಸಕಇ 560 ಎಸ್ಎಲ್‌ಪಿ 2024 ರಲ್ಲಿ ಸದನಕ್ಕೆ ತಿಳಿಸಿರುವಂತೆ ಮಂಡ್ಯ ಜಿಲ್ಲೆಯ ಮಂಡ್ಯ ಲೋಕಸಭಾ ಕ್ಷೇತ್ರವ್ಯಾಪ್ತಿಯ 08 ವಿಧಾನ ಸಭಾಕ್ಷೇತ್ರಗಳ ವ್ಯಾಪ್ತಿಯಲ್ಲಿನ ಪರಿಶಿಷ್ಟಜಾತಿ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಸಂಬಂಧವಾಗಿ ದಿನಾಂಕ: 12.07.2024 ರಲ್ಲಿ ಕೋರಿರುವಂತೆ ಪ್ರಸಕ್ತ ಸಾಲಿನಲ್ಲಿ ಒದಗಿಸಿಕೊಳ್ಳಲಾಗಿರುವ ಅನುದಾನದ ಲಭ್ಯತೆಯನ್ನು ಆಧರಿಸಿ ಅನುದಾನ ಮಂಜೂರು ಮಾಡುವ ಪ್ರಸ್ತಾವನೆಯು ಕಡತ ಸಂಖ್ಯೆ: SWD/ INFR/ INF5(CLNY)/ 69/ 2024 ಪರಿಶೀಲನೆಯಲ್ಲಿದೆ ಎಂದು ತಿಳಿಸಿರುತ್ತಾರೆ, ಆದರೆ ಇಲ್ಲಿಯವರೆಗೆ ಪರಿಗಣಿಸದಿರಲು ಕಾರಣಗಳೇನು ಹಾಗೂ ಈ ಕಡತ ಸಲ್ಲಿಕೆಯಾದ ನಂತರ ಮಾನ್ಯ ಸಚಿವರ ಆದೇಶದ ಮೇರೆಗೆ ರೂ.900 ಕೋಟಿಗಳ ಮೊತ್ತದ ಪ್ರಗತಿ ಕಾಲೋನಿ ಯೋಜನೆಯ ಕಾಮಗಾರಿಗಳಿಗೆ ಆದೇಶ ಹೊರಡಿಸುವಾಗ ಮೇಲಿನ ಕಡತಕ್ಕೆ ಅನುದಾನ ಬಿಡುಗಡೆ ಮಾಡದಿರಲು ಯಾವ ಯಾವ ಮಾನದಂಡಗಳನ್ನುಅನುಸರಿಸಲಾಗಿದೆ, ರೂ.900 ಕೋಟಿಗಳ ಮೊತ್ತದ ಅನುದಾನದ ಆದೇಶಗಳನ್ನು ಹೊರಡಿಸುವಾಗ ಅನುಸರಿಸಲಾಗಿರುವ ಮಾನದಂಡಗಳೇನು ಎಂಬ ವಿಷಯದ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

ಉತ್ತರ:

2024-25ನೇ ಸಾಲಿನಲ್ಲಿ ಪ್ರಗತಿ ಕಾಲೋನಿ ಯೋಜನೆಯಡಿ ಪರಿಶಿಷ್ಟ ಜಾತಿಯವರ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ವಿಧಾನಸಭಾ ಕ್ಷೇತ್ರಗಳಿಗೆ ಈ ಕೆಳಕಂಡಂತೆ ಅನುದಾನ ಮಂಜೂರು ಮಾಡಿ ಮೊದಲನೇ ಕಂತಿನಲ್ಲಿ ಶೇ 33ರಷ್ಟು ಅನುದಾನವನ್ನು ಜಿಲ್ಲೆಗೆ ಬಿಡುಗಡೆ ಮಾಡಲಾಗಿರುತ್ತದೆ. ಮುಂದುವರೆದು, ಕಾಮಗಾರಿಗಳ ಭೌತಿಕ ಪ್ರಗತಿಯನ್ನು ಆಧರಿಸಿ, ಅನುದಾನದ ಲಭ್ಯತೆಯನುಸಾರ ಇನ್ನೂಳಿದ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.

(ರೂ.ಲಕ್ಷಗಳಲ್ಲಿ)

| ಕ್ರಸ | ವಿಧಾನಸಭಾ ಕ್ಷೇತ್ರದ ಹೆಸರು | ಅನುದಾನ ಮಂಜೂರು ಮಾಡಿದ ಮೊತ್ತ | ಬಿಡುಗಡೆ ಮಾಡಿದ ಅನುದಾನದ ವಿವರ |
|---|---|---|---|
| 1 | ಕೆ.ಆರ್. ಪೇಟೆ | 300.00 | 99.00 |
| 2 | ಮಂಡ್ಯ | 550.00 | 181.50 |
| 3 | ಮದ್ದೂರು | 430.00 | 141.90 |

| | | | |
|---|---|---|---|
| 4 | ಮಳವಳ್ಳಿ | 500.00 | 165.00 |
| 5 | ಶ್ರೀರಂಗಪಟ್ಟಣ | 400.00 | 132.00 |
| 6 | ಮೇಲುಕೋಟೆ | 550.00 | 181.50 |
| 7 | ನಾಗಮಂಗಲ | 900.00 | 297.00 |
| 8 | ಕೆ.ಆರ್.ನಗರ | 400.00 | 132.00 |
| | ಒಟ್ಟು | 4030.00 | 1329.90 |

ಸಂಖ್ಯೆ:ಸಕಇ 242 ಎಸ್‌ಎಲ್‌ಪಿ 2025

(ಡಾ. ಹೆಚ್.ಸಿ. ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು